**SC No. 313/2018**
**C/w 160/2022**
**C/w 24/2023**
**P.W. 1**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 313/2018**
**C/w S.C. No. 160/2022**
**C/w S.C. No. 24/2023**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **25.05.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ವರ್ತೂರಿನ ಕೋಡಿ ಬಳಿ ಮಾಲ್ ನಲ್ಲಿ ಖಾರದ ಪುಡಿ ಎರಚಿ ನನ್ನ ಮೇಲೆ ಹಲ್ಲೆ ಮಾಡಿದ್ದು, ನಂತರ ನನ್ನ ತಮ್ಮ ಮಂಜುನಾಥ್ ಕೊಲಂಬಿಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ಪೊಲೀಸರು ಆಸ್ಪತ್ರೆಗೆ ಬಂದು ದೂರನ್ನು ಬರೆದುಕೊಂಡರು. ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ, ಕಾರಣ ನನ್ನ ಮೇಲೆ ಖಾರದ ಪುಡಿ ಎರಚಿದ್ದರು. ಮಂಜುನಾಥ್ ಮತ್ತು ಗಣೇಶ್ ರವರು ಮಹಜರ್ ಮಾಡುವ ಸಮಯದಲ್ಲಿ ಹಾಜರಿದ್ದು ಮಹಜರ್ ಸಮಯದಲ್ಲಿ ಏನು ಮಾಡಿದರು ಎಂದು ಗೊತ್ತಿಲ್ಲ. ನಾನು ಆ ಸಮಯದಲ್ಲಿ ಆಸ್ಪತ್ರೆಯಲ್ಲಿ ಇದ್ದೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ ಒಂದು ಮಚ್ಚು, ಒಂದು ಲಾಂಗ್, ಎರಡು ಗಾಲ್ಫ್ ಸ್ಟಿಕ್ ಗಳನ್ನು ಸಾಕ್ಷಿ ಗುರುತಿಸಲಿಲ್ಲ.

(ಈ ಸಾಕ್ಷಿಯನ್ನು ಭಾಗಶಃ ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಒಂದು ಮಚ್ಚು, ಒಂದು ಲಾಂಗ್, ಎರಡು ಗಾಲ್ಫ್ ಸ್ಟಿಕ್ ಗಳನ್ನು ಪೊಲೀಸರು ನನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡರು ಎಂದರೆ ಸರಿ ಅಲ್ಲ. ಪೊಲೀಸರು ಘಟನಾ ಸ್ಥಳದಲ್ಲಿ ಕಾರಿನಲ್ಲಿ ಬಿದ್ದಿದ್ದ ರಕ್ತದ

ಕಲೆಗಳನ್ನು, ರಕ್ತ ಮಿಶ್ರಿತ ಮಣ್ಣನ್ನು, ಮಾದರಿ ಮಣ್ಣು ಅನ್ನು ಸಂಗ್ರಹಿಸಿ ಮತ್ತು KA-03/MZ-2250 ಕಾರನ್ನು ವಶಕ್ಕೆ ಎಂದರೆ ಸರಿ ಅಲ್ಲ. ಮಹಜರ್ ಸಮಯದಲ್ಲಿ ವೇಣು ಹಾಜರಿದ್ದರು ಎಂದರೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಮಹಜರ್ ಮಾಡಿ ಓದಿ ಹೇಳಿದ ನಂತರ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿದ್ದರು ಎಂದರೆ ಅಷ್ಟಾಗಿ ಗೊತ್ತಾಗುವುದಿಲ್ಲ. ಈಗ ಆರೋಪಿತರೊಂದಿಗೆ ರಾಜೀಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಕೀಲರಿಂದ ಶ್ರೀ. ವಕೀಲರ ಪರವಾಗಿ :

ನಿಶಾನೆ.ಪಿ. 1 ರ ಒಕ್ಕಣೆ ಗೊತ್ತಿಲ್ಲ ಮತ್ತು ದೂರನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಕಣ್ಣಿನಲ್ಲಿ ಖಾರದ ಪುಡಿ ಬಿದ್ದು ದುಃಖದಲ್ಲಿ ಇದ್ದಾಗ ಯಾರೋ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ. ಖಾರದ ಪುಡಿಯನ್ನು ಯಾರು ಹಾಕಿದ್ದರು ಮತ್ತು ನಂತರ ಏನಾಯಿತು ಎಂದು ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಪೊಲೀಸರು ಹೇಳಿಕೊಟ್ಟಂತೆ ಹೇಳಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12.01.2017 ರಂದು ಕಾಡುಗೋಡಿಯಲ್ಲಿ ಎ.ಸಿ. ಶ್ರೀನಿವಾಸ್ ರವರು ಜನ್ಮ ದಿನ ಕಾರ್ಯಕ್ರಮಕ್ಕೆ ನಾನು ಚಾಸಾ. 2 ರಿಂದ 6 ಕಾರು ಸಂಖ್ಯೆ KA-03/MZ-2250 ಹೋಗಿದ್ದು ವಾಪಸ್ಸು 3.15 ಕ್ಕೆ ಬರುವಾಗ ವರ್ತೂರಿನ ಕೋಡಿಯ ಬಳಿ ನಮ್ಮನ್ನು ನ್ಯಾಯಾಲಯದ ಮುಂದೆ ಇರುವ ಎಲ್ಲಾ ಆರೋಪಿತರು ಅಡ್ಡಗಟ್ಟಿದ್ದು ಅವರ ಜೊತೆಗೆ ಚಂದ್ರ ಸಹ ಇದ್ದು ಎಲ್ಲಾ ಆರೋಪಿತರು ಮಚ್ಚು, ಲಾಂಗ್, ಗಾಲ್ಫ ಸ್ಟಿಕ್ಗಳನ್ನು ಕೈಗಳಲ್ಲಿ ಹಿಡಿದುಕೊಂಡು ನನಗೆ ಹೊಡೆಯಲು ಬಂದಾಗ ನಾನು ತಪ್ಪಿ ಸಿಕೊಂಡಿದ್ದು ಗಿರೀಶ್ ರವರಿಗೆ ಗಾಲ್ಫ ಸ್ಟಿಕ್ ನಿಂದ ಹಲ್ಲೆ ಮಾಡಿದ್ದರೆ ಹಾಗೂ ಹಳೇ ದ್ವೇಷದಿಂದ 2018 ರಲ್ಲಿ ರೋಹಿತ್ ರವರ ಅಣ್ಣನನ್ನು ಯಾರೋ ಕೊಲೆ ಮಾಡಿದ್ದು ಆ ದ್ವೇಷದಿಂದ ನಮ್ಮ ಮೇಲೆ ಹಲ್ಲೆ ಮಾಡಿದ್ದು ಎಂದು ಪೊಲೀಸರು ಹೇಳಿಕೊಟ್ಟಂತೆ ಹೇಳಿದ್ದೇನೆ ಎಂದರೆ ಸರಿ. ಅದೇ ಗಣೇಶ್ ಮತ್ತು ಗಿರೀಶ್ ರವರಿಗೆ ಗಾಯವಾಗಿದ್ದು ಅವರನ್ನು ಕೊಲಂಬಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎಂದು ಮತ್ತು ಆ ನಂತರ ಪೊಲೀಸರಿಗೆ ದೂರು ನೀಡಿದ್ದೇವೆ ಎಂದು ಪೊಲೀಸರು ಹೇಳಿಕೊಟ್ಟಂತೆ ಹೇಳಿದ್ದೇನೆ ಎಂದರೆ ಸರಿ.

ನಿಶಾನೆ.ಫಿ 2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಮತ್ತು ಅದರ ಒಕ್ಕಣೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆ ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಪೊಲೀಸರು ನನಗೆ ಹೇಕೊಟ್ಟಿರುತ್ತಾರೆ ಮತ್ತು ಒತ್ತಾಯ ಮಾಡಿರುತ್ತಾರೆ ಎಂದು ನಾನು ದೂರನ್ನು ನೀಡಿಲ್ಲ. ಪೊಲೀಸರ ಮೇಲೆ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ. ಪೊಲೀಸರು ನನಗೆ ಸಾಕ್ಷಿ ಹೇಳಲು ಒತ್ತಾಯ ಮಾಡಿರಲಿಲ್ಲ ಮತ್ತು ಈಗ ರಾಜೀ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಮಾಹಿತಿ ನಿಜ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.